(ಊ) ಸುಳ್ಳು ಜಾತಿ ಪ್ರಮಾಣ ಪತ್ರಪಡೆದು ಸರ್ಕಾರಿ ಸೌಲಭ್ಯ ಪಡೆಯುತ್ತಿರುವ ವಿಚಾರ

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಉಪಸಭಾಧ್ಯಕ್ಷರೆ, ಒಂದು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಎಲ್ಲಾ ಸರ್ಕಾರಿ ಸೌಲಭ್ಯ ಪಡೆದಂತಹ ಒಂದು ಗಂಭೀರವಾದ ವಿಷಯ ಇದೆ. ಎಸ್‌ಸಿ ಜನಾಂಗಕ್ಕೆ ಸೇರದೇ ಇರತಕ್ಕಂಥ ಒಬ್ಬ ವ್ಯಕ್ತಿ ಸರ್ಕಾರಿ ಆಜ್ಞೆಯ ಪ್ರಕಾರ 2ಎ ಗುಂಪಿಗೆ ಬರತಕ್ಕಂಥ ಪಟ್ಟರ ಜಾತಿಗೆ ಸೇರತಕ್ಕಂಥದ್ದು ಮತ್ತು ಸರ್ಕಾರಿ ಗೆಜೆಟ್ ನೋಟೀಫಿಕೇಷನಲ್ಲಿ 2ಎ ಗುಂಪಿಗೆ ಬರುತ್ತದೆ ಎಂದು ಇದೆ. ಅಂಥ ಒಬ್ಬ ವ್ಯಕ್ತಿ ಚಿಂತಾಮಣಿ ತಾಲ್ಲೂಕು ರಿಂಗಬಲ್ಲಿ ಗ್ರಾಮದ ವಿ ನಾಗರಾಜು ಸನ್ ಆಫ್ ವೆಂಕಟರಾಯಪ್ಪ ಎಂಬ ಒಬ್ಬ ವ್ಯಕ್ತಿ ತಾನು ಎಸ್‌ಸಿ ಎಂದು ಹೇಳಿ ಎಲ್ಲಾ ಪ್ರಮಾಣ ಪತ್ರ ಪಡೆದು ತನ್ನ ಹೆಂಡತಿಯನ್ನು ಗ್ರಾಮಾಪಂಚಾಯಿತಿಯ ಎಸ್‌ಸಿಗೆ ಮೀಸಲಾಗಿರತಕ್ಕಂಥ ಒಂದು ಮತಕ್ಷೇತ್ರದಲ್ಲಿ ಆಯ್ಕೆಯಾಗಿ ಆ ಜನಾಂಗಕ್ಕೆ ಬರುವ ಎಲ್ಲಾ ಸೌಲಭ್ಯಗಳನ್ನು ಪಡೆದು ಸರ್ಕಾರಕ್ಕೆ ವಂಚನೆ ಮಾಡಿರತಕ್ಕಂಥ ಒಂದು ಪ್ರಕರಣ. ಇನ್ನೊಂದು ಎಸ್‌ಟಿ ಪ್ರಮಾಣ ಪತ್ರದಿಂದ ಆತನು ತನಗೆ ಆಗದೇ ಇರತಕ್ಕ ಸುತ್ತಮುತ್ತಲಿನ ಹಳ್ಳಿಯ ಜನರ ಮೇಲೆ ಅಟ್ರಾಸಿಟಿ ಕೇಸನ್ನು ರಿಜಸ್ಟರ್ ಮಾಡಿ ಇಡೀ 5-6 ಹಳ್ಳಿಗಳಲ್ಲಿ ಟೆರರೈಸ್ ಮಾಡಿ ಪ್ರಮಾಣ ಪತ್ರವನ್ನು ದುರುಪಯೋಗ ಮಾಡಿಕೊಂಡಿದ್ದಾನೆ. ನೋಂದಣಿ ಮಾಡಿ ಭೂಮಿಯನ್ನು ಮಾರಾಟ ಮಾಡಿರುವ ಪತ್ರದಲ್ಲೂ ಕೂಡ ಸ್ಪಷ್ಟವಾಗಿ ಹೇಳಿದ್ದಾರೆ ನಾವು ಪಟ್ಟರು ಜಾತಿಗೆ ಸೇರಿದ ವೆಂಕಟರಾಯಪ್ಪ ಎಂದು, ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಆತ ನೋಂದಣಿ ಮಾಡಿರುವ ಪತ್ರದಲ್ಲಿ ಇದು ಇದೆ. ಹಾಗೂ ಆತ ಶಾಲೆಗೆ ಸೇರಿರುವ ಟಿ.ಸಿ.ಯಲ್ಲಿ ಕೂಡ ಪಟ್ಟರ ಜಾತಿ ಎಂದು ಇದೆ. ಇಷ್ಟೆಲ್ಲಾ ಇದ್ದರೂ ಕೂಡ ಇವನಿಗೆ ಎಸ್‌ಟಿ ಪ್ರಮಾಣ ಪತ್ರ ಕೊಟ್ಟಿರತಕ್ಕಂಥ ಚಿಂತಾಮಣಿಯ ತಾಲ್ಲೂಕಿನ ಕಂದಾಯ ಅಧಿಕಾರಿಗಳು ಇಂತಹ ಅಧಿಕಾರಿಗಳನ್ನು ಏನು ಮಾಡಬೇಕು? ಜೊತೆಗೆ ಒಂದು ಅವರು ಹಿಂಬರಹ ಕೂಡ ಕೊಟ್ಟಿದ್ದಾರೆ ಅದರಲ್ಲಿ ಏನು ಹೇಳುತ್ತಾರೆಂದರೆ:

''ನಾಗರಾಜನ ಶಾಲಾ ದಾಖಾಲಾತಿಗಳಲ್ಲಿ ಜಾತಿ ಪಟ್ಟರು ಎಂಬುದರ ಬಗ್ಗೆ ವಿಚಾರ ಮಾಡಿದ್ದು ಇವರ ಪೂರ್ವಜರು ಸೇನೆಯಲ್ಲಿ ಇದ್ದುದ್ದರಿಂದ ಅವರನ್ನು ಮುಖಂಡರು ಎನ್ನುವ ಅರ್ಥದಲ್ಲಿ ಅವರನ್ನು ಪಟ್ಟರು ಎಂದು ಕರೆದ ಕಾರಣ ಶಾಲಾದಾಖಲೆಗಳಲ್ಲಿ ಪಟ್ಟರು ಎಂದು ಬರೆದಿದೆ ಎಂದು ತಿಳಿದು ಬಂದಿದೆ. ಇದು ಒಂದಾದರೆ ಇದೆಕ್ಕೆಲ್ಲಾ ವಿಚಿತ್ರವಾದುದು ಎಂದರೆ ಇದೆಲ್ಲಾ ಹೇಳಿ ಮತ್ತೆ ಕೊನೆಗೆ ಏನು ಹೇಳುತ್ತಾರೆಂದರೆ:

''1993ರ ಗ್ರಾಮ ಪಂಚಾಯಿತಿಯಲ್ಲಿ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿರುವ ಮಹಿಳಾ ಸದಸ್ಯರ ಸ್ಥಾನಕ್ಕೆ ಸದರಿಯವರ ಪತ್ನಿ ಶ್ರೀಮತಿ ಉಷಾ ಸ್ಪರ್ಧಿಸಿ ಸದಸ್ಯರಾಗಿ ಚುನಾಯಿತರಾಗಿರುವುದು ತನಿಖೆಯ ಕಾಲದಲ್ಲಿ ತಿಳಿದು ಬಂದಿದೆ, ನಾಮಪತ್ರಗಳ ಪರಿಷ್ಕರಣದಲ್ಲಿ ಯಾರೂ ಇದನ್ನು ಆಕ್ಷೇಪಿಸಿರುವುದಿಲ್ಲ ಎಂದು ವ್ಯಕ್ತವಾಗಿರುತ್ತದೆ.

ಅಂದರೆ ಇಲ್ಲಿ ಅವರು ಆಕ್ಷೇಪ ಮಾಡಿಲ್ಲ ಎಂದು ಹೇಳುತ್ತಾರೆ, ಈ ರೀತಿಯ ಹಿಂಬರಹ ಅರ್ಥ ಏನೆಂದರೆ ಸದರಿಯವರ ಹೆಂಡತಿ ಎಂದು ಕೊಟ್ಟಿದ್ದೇವೆ ಎಂದೆನ್ನುತ್ತಾರೆ. ಇದರಲ್ಲಿ ಮತ್ತೊಂದು ವಿಚಿತ್ರವೆನೆಂದರೆ ತಂದೆ ಪಟ್ಟರು, ಮಗ ಎಸ್‌ಟಿ ಎಂದು ಇದರಲ್ಲಿ ಕೊಟ್ಟಿದ್ದಾರೆ. ಸದರಿಯವರ ತಾಯಿ ಶ್ರೀನಿವಾಸಪುರ ತಾಲ್ಲೂಕಿನ ನೆಲವಂಕಿ ಗ್ರಾಮದ ನಾಯಕ ಕುಟುಂಬಕ್ಕೆ ಸೇರಿದ್ದು ಇದಕ್ಕೆ ಪೂರಕವಾಗಿ ಸದರಿಯವರು ಮತ್ತು ಸದರಿ ಕುಟುಂಬದ ಸದಸ್ಯರಾದ ಸಹೋದರ ನರಸಿಂಹಪ್ಪ ಮತ್ತು ಅಣ್ಣನ ಮಗಳು ಇವರು ಎಲ್ಲರೂ ಸೇರಿ...

ಉಪಾಧ್ಯಕ್ಷರು: ನೋಡಿ ಈಗ ಇತಿಹಾಸ ಬೇಡ, ಮುಖ್ಯವಾಗಿ ಏನು ಹೇಳಬೇಕೋ ಅದನ್ನು ಹೇಳಿ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮುಖ್ಯವಾಗಿ ನಾನು ಇಷ್ಟೇ ಹೇಳುವುದಕ್ಕೆ ಬಯಸುತ್ತೇನೆ ಎಸ್‌ಟಿ ಜನಾಂಗಕ್ಕೆ ಸಿಗುವ ಸೌಲಭ್ಯವನ್ನು ದುರಪಯೋಗ ಮಾಡಿಕೊಂಡು ಎಲ್ಲಾ ಸೌಲಭ್ಯಗಳನ್ನು ಪಡೆದಿದ್ದಾರೆ ಇದಕ್ಕೆ ಶಿಕ್ಷೆ ಆಗಬೇಕು, ಎರಡನೆಯದಾಗಿ ಯಾರು ಈ ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಕೊಟ್ಟರತಕ್ಕಂಥ ಕಂದಾಯ ಅಧಿಕಾರಿಗಳು ಏನಿದ್ದಾರೆ ತಹಶೀಲ್ದಾರ್ ಇರಬಹುದು, ಬೇರೆ ಯಾರೇ ಆಗಿರಬಹುದು, ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಂಡು ಸಸ್‌ಪೆಂಡ್ ಮಾಡಬೇಕು, ಹಾಗೂ ಹಿಂಬರಹ ಕೊಟ್ಟರತಕ್ಕಂಥ ತಹಸೀಲ್ದಾರ್ ಅವರನ್ನೂ ಕೂಡ ತಕ್ಷಣ ಸಸ್‌ಪೆಂಡ್ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಮಾನ್ಯ ಉಪಸಭಾಧ್ಯಕ್ಷರೇ, ಸರ್ಕಾರ ಯಾವಾಗಲೂ ಇದಕ್ಕೆ ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸುತ್ತದೆ. ಹಿಂದೆ ಜಾತಿ ಪ್ರಮಾಣ ಪತ್ರ ಕೊಡುವಾಗ ಪ್ರೈಮರಿ ಶಾಲೆಯ ಪ್ರಮಾಣ ಪತ್ರದ ಆಧಾರದ ಮೇಲೆ ಕೊಡುತ್ತಿದ್ದರು, ಇದು ಬಹಳ ಸಡಿಲವಾದ ಕ್ರಮವಾಗಿರುವುದರಿಂದ ಅನಾವಶ್ಯಕವಾಗಿ ಕೆಲವು ಜನ ಬೇರೆ ಬೇರೆ ಪ್ರಕರಣಗಳಲ್ಲಿ ಕೆಲವು ಹುದ್ದೆಗಳನ್ನು ಪಡೆದರು ಮತ್ತು ಶೈಕ್ಷಣಿಕ ರಂಗದಲ್ಲಿ ವಂಚನೆ ಮಾಡಿ ಸ್ಥಾನಗಳನ್ನು ಪಡೆಯುತ್ತಾರೆಂದು ತಿಳಿದು ಬಂದಾಗ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ನಿನ್ನೆ ಮಾನ್ಯ ವಾಟಾಳ್‌ನಾಗರಾಜ್‌ರವರು ಇದರ ಬಗ್ಗೆ ಪ್ರಸ್ತಾಪ ಮಾಡಿ ಇದನ್ನು ಸರಳೀಕರಣಗೊಳಿಸಿ ಎಂದು ಹೇಳಿದ್ದಾರೆ ಅವರಿಗೆ ನಾನು ಈಗಾಗಲೇ ಆಶ್ವಾಸನೆ ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಅದೇ ಬೇರೆ, ಇದೇ ಬೇರೆ. ದಯಮಾಡಿ, ಒಂದಕ್ಕೊಂದಕ್ಕೆ ಸಂಬಂಧ ಇಲ್ಲ. ಇದನ್ನು, ಅದಕ್ಕೆ ಸೇರಿಸುವುದಕ್ಕೆ ಹೋಗಬೇಡಿ. ಒಂದಕ್ಕೊಂದು ತಾಳೆ ಮಾಡಿ, ಎಲ್ಲರನ್ನೂ ನೀವು ಹಳ್ಳಕ್ಕೆ ತಳ್ಳುತ್ತಿದ್ದೀರಿ. ಇವರ ವಿಚಾರವೇ ಬೇರೆ, ನಾವು ಮೊನ್ನೆ ಪ್ರಸ್ತಾಪ ಮಾಡಿದ ವಿಚಾರವೇ ಬೇರೆ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಜಾತೀಯ ಸರ್ಟಿಫಿಕೇಟ್ ಕೊಡುವಾಗ, ಶಾಲೆಯ ಟ್ರಾನ್ಸ್‌ಫರ್ ಸರ್ಟಿಫಿಕೇಟ್ ಜೊತೆಗೆ, ಕೆಲವು ಮೂಲಭೂತವಾಗಿ ಅವರು ಇರತಕ್ಕಂಥ ಸ್ಥಳ ಯಾವುದು, ಅವರ ಹಿನ್ನೆಲೆ ಏನು, ಅವರು ಯಾವುದನ್ನು ಸೇಲ್ ಡೀಡ್ ಮಾಡಿದ್ದಾರೆ, ಇದನ್ನೆಲ್ಲಾ ವಿಚಾರ ಮಾಡಿ ನಾವು ಸರ್ಟಿಫಿಕೇಟ್ ಕೊಡತಕ್ಕಂಥ ವ್ಯವಸ್ಥೆ ಇದೆ. ಅದಕ್ಕೆ ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆ ಎಂಬ ದೂರು ವಾಟಾಳ್ ನಾಗರಾಜ್ ಅವರದ್ದು,ಇದು ವಾಸ್ತವಾಂಶ. ಈ ಎಲ್ಲಾ ವಿಚಾರಗಳನ್ನು ಗಮನಿಸಿ, 15 ದಿವಸದೊಳಗಾಗಿ ಸರ್ಟಿಫಿಕೇಟ್ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಈಗಾಗಲೇ ಕಾರ್ಯದರ್ಶಿಯವರಿಗೆ ಹೇಳಿದ್ದೇನೆ. ಇದರ ಜೊತೆಗೆ ಶ್ರೀರಾಮರೆಡ್ಡಿಯವರು ಒಂದು ಪ್ರಕರಣವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅವರ ಅಮ್ಮ ಯಾವ ಜಾತಿಯಲ್ಲಿದ್ದರು ಎಂಬ ಪ್ರಶ್ನೆಯೂ ಬರುತ್ತದೆ. ಪರಿಶಿಷ್ಟಜಾತಿಗೆ ಒಬ್ಬರು ಸೇರಿ, ಆ ವರ್ಗಕ್ಕೆ ಸೇರದೇ ಇರತಕ್ಕವರ ಜೊತೆ ಮದುವೆಯಾದಾಗ, ಅವರ ಮಕ್ಕಳು ಯಾವುದಕ್ಕೆ ಸೇರುತ್ತಾರೆಂಬುದಕ್ಕೆ ಒಂದು ವಿಧಿ ವಿಧಾನ ಇದೆ. ಇದನ್ನು ಇವತ್ತು ನನ್ನ ಗಮನಕ್ಕೆ ತಂದಿದ್ದಾರೆ, ನಾನು ಅದರ ಬಗ್ಗೆ ವಿಚಾರ ಮಾಡುತ್ತೇನೆ. ಮತ್ತು ಸೂಕ್ತ ಕ್ರಮ ಕೈಗೊಳ್ಳತಕ್ಕ ವಿಚಾರ ಮಾಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರಿಗೆ ಈ ವಿಷಯ ಪೂರ್ತಿಯಾಗಿ ಗೊತ್ತಿದೆ. ಆದರೆ,ಇಲ್ಲಿ ನನ್ನ ಪ್ರಶ್ನೆ ಇರತಕ್ಕಂಥಾದ್ದು, ಸ್ಪಷ್ಟವಾಗಿ ದಾಖಲಾತಿಗಳ ಮುಖಾಂತರ ನಾನು ಹೇಳುತ್ತಿದ್ದೇನೆ. ಸುಳ್ಳು ಜಾತಿ ಪತ್ರವನ್ನು ಪಡೆದಿದ್ದಾರೆ. ಸುಳ್ಳು ಜಾತಿಪತ್ರ ಕೊಟ್ಟಿರತಕ್ಕ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಅವರನ್ನು ಸಸ್ಪೆಂಡ್ ಮಾಡಬೇಕು. ಅದನ್ನು ನಾನು ಕೇಳುತ್ತಿದ್ದೇನೆ. ಅಮ್ಮ ಬೇರೆ ಜಾತಿಯವರಾದರೆ, ಇವರು ಬೇರೆ ಜಾತಿಯವರಾದರೆ, ಅದಕ್ಕೆ ಸರ್ಕಾರದ ಕಾನೂನು ಸರಿಯಾಗಿದೆ. ತಂದೆ ಯಾವ ಜಾತಿಯವರೋ, ಮಕ್ಕಳೂ ಕೂಡ ಅದೇ ಜಾತಿಯವರಾಗಬೇಕು. ಮಕ್ಕಳು ಬೇರೆ ಜಾತಿಯಾಗುವುದಕ್ಕೆ ಸಾಧ್ಯವಿಲ್ಲ. ಈಗ ಭಾರತ ದೇಶದಲ್ಲಿರತಕ್ಕ ಕಾನೂನು ಪ್ರಕಾರ, ತಂದೆ ಯಾವ ಜಾತಿಯೋ ಅದೇ ಜಾತಿಗೆ ಮಕ್ಕಳೂ ಬರಬೇಕಾಗುತ್ತದೆ. ತಾಯಿ ಜಾತಿಗೆ ಬರಲಿಕ್ಕೆ ಸಾಧ್ಯವಿಲ್ಲ.

ಉಪಾಧ್ಯಕ್ಷರು: ಅವರು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ತಾವು ಇಲ್ಲಿ ಭಾಷಣ ಮಾಡುತ್ತಾ ಕುಳಿತರೆ ಹೇಗೆ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅವರು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ವಿಷಯವಾಗಿ ಹೇಳಲಿಲ್ಲ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಪರಿಶಿಷ್ಟಜಾತಿಯವರನ್ನು ಬೇರೆವರ್ಗದವರು ಮದುವೆಯಾದಾಗ, ಅವರ ಮೂಲ ಎಲ್ಲಿ ವಾಸ ಮಾಡುತ್ತಾರೆ ಮತ್ತೆ ಆ ಮಕ್ಕಳು ಎಲ್ಲಿ ಇರುತ್ತಾರೆ ಎಂಬ ಬಗ್ಗೆ ಒಂದು ನಿಗದಿ ಇದೆ. ಅದು ಬೇರೆ ಪ್ರಶ್ನೆ. ನೀವು ಅಧಿಕಾರಿಗಳ

ತಪ್ಪು ಎಂದು ಹೇಳುತ್ತೀರಿ. ಆದರೆ, ಅದನ್ನು ವಿಚಾರ ಮಾಡಬೇಕಲ್ಲಾ, ಮೂಲವಾಗಿ ಅವರು ಯಾವ ಕಮ್ಯುನಿಟಿಗೆ ಸೇರಿದ್ದಾರೆಂಬುದನ್ನು ವಿಚಾರ ಮಾಡಬೇಕು. ಈಗ ತಾವೇನು ಆಪಾದನೆ ಮಾಡಿದ್ದೀರಿ, ಇದನ್ನು ಸ್ವಲ್ಪ ವಿಚಾರಣೆ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಒಬ್ಬರಿಗೆ ಒಂದು ಜಾತಿ ಸರ್ಟಿಫಿಕೇಟ್ ಕೊಟ್ಟಿದ್ದಾರೆ, ದಾಖಲೆಗಳ ಪ್ರಕಾರ, ಅವರ ಅಲಿಗೇಷನ್ಸ್ ಅದು ಸುಳ್ಳು ಸರ್ಟಿಫಿಕೇಟ್ ಎಂದು ಅವರು ಹೇಳುತ್ತಿದ್ದಾರೆ. ಒಂದುಸಾರಿ ಜಾತಿ ಸರ್ಟಿಫಿಕೇಟ್ ಕೊಟ್ಟಿದ್ದನ್ನು ಸುಳ್ಳು ಎಂದು ಮಾಡಬೇಕಾದರೆ ಯಾರಿಗೆ ಅಧಿಕಾರ ಇದೆ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಸುಳ್ಳು ದಾಖಲೆ ಪ್ರಕರಣವನ್ನು ಸರ್ಕಾರದ ಗಮನಕ್ಕೆ ತಂದಾಗ, ಅದಕ್ಕೆ ಒಂದು ವ್ಯವಸ್ಥೆ ಇದೆ. ಅದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ.

ಉಪಾಧ್ಯಕ್ಷರು: ಸೂಕ್ತ ಕ್ರಮ ಎಂದು ಹೇಳಿದಮೇಲೆ ಮುಗಿಯಿತಲ್ಲಾ. ಮತ್ತೆ ಅವರು ಏನು ಹೇಳಬೇಕು?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಸಚಿವರೇ, ಇವರು ಹೇಳುವುದೊಂದು, ನೀವು ಹೇಳುವುದೊಂದು.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಮಾನ್ಯ ವಾಟಾಳ್ ನಾಗರಾಜರು, ಇದನ್ನು ಸರಳೀಕರಣಗೊಳಿಸಿ ಸರ್ಟಿಫಿಕೇಟ್ ಕೊಡತಕ್ಕ ವ್ಯವಸ್ಥೆ ಮಾಡಿ ಎಂದು ಕೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ನನ್ನ ವಿಷಯಕ್ಕೂ ಇದಕ್ಕೂ ಸಂಬಂಧ ಇಲ್ಲ. ಸರಳೀಕರಣ ಮಾಡುವುದು, ಅದೇ ಬೇರೆ, ಇದೇ ಬೇರೆ. ಈಗ ಇದರಲ್ಲಿ, ಮಾಡಿರತಕ್ಕ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ಎಂಬುದು ನೇರವಾದ ಪ್ರಶ್ನೆ. ಅದಕ್ಕೆ ತಾವು ಉತ್ತರ ಕೊಡಿ ಎಂದು ಹೇಳಿದರೆ, ವಾಟಾಳ್ ನಾಗರಾಜರು ಹೇಳಿದರು ಎಂದು ನನಗೊಂದು ಉತ್ತರ ಕೊಡುವುದಕ್ಕೆ ಹೋಗಬೇಡಿ. ಇಲ್ಲಿ ಶ್ರೀರಾಮರೆಡ್ಡಿಯವರು ಹೇಳಿದ್ದು ಏನು, ಈ ಕ್ರಮದ ಹಿಂದೆ ಇರತಕ್ಕ ಅಧಿಕಾರಿಯ ಮೇಲೆ, ನೇರವಾಗಿ ಏನು ಕ್ರಮ ಕೈಗೊಂಡಿದ್ದೀರಿ ಎಂಬುದಷ್ಟೇ ವಿಚಾರ. ಅಷ್ಟಕ್ಕೇ ನೀವು ಹೇಳಿ. ನಾನು ಹೇಳಿರತಕ್ಕಂತಾದ್ದು ನಾಯಕ ಜನಾಂಗಕ್ಕೆ ಕೊಡಬೇಕಾಗಿರುವುದನ್ನು ನೀವು ಕೊಡಲೇಬೇಕಾಗುತ್ತದೆ.

ಉಪಾಧ್ಯಕ್ಷರು: ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಿದ್ದಾರೆ. ಅದಕ್ಕೆ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಆದರೆ, ನೀವು ಎಷ್ಟು ಹೊತ್ತಿನಲ್ಲಿ ತೆಗೆದುಕೊಳ್ಳುತ್ತೀರಿ, ರಾತ್ರಿ ತೆಗೆದುಕೊಳ್ಳುತ್ತೀರೋ, ಹಗಲು ತೆಗೆದುಕೊಳ್ಳುತ್ತೀರೋ ಎಂದು ಕೇಳಿದರೆ ಅವರು ಏನು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್: ಸೂಕ್ತ ಕ್ರಮ ಎಂದರೆ ಏನು ಸ್ವಾಮಿ?

(ಗೊಂದಲ)

ಉಪಾಧ್ಯಕ್ಷರು: ಸರ್ಕಾರದೊಳಗೆ ಒಂದು ವ್ಯವಸ್ಥೆ ಇದೆ.

ಶ್ರೀ ವಾಟಾಳ್ ನಾಗರಾಜ್: ನಾವು ನೇರವಾಗಿ ಆಪಾದನೆ ಮಾಡುತ್ತಾ ಇದ್ದೇವೆ.

ಉಪಾಧ್ಯಕ್ಷರು: ತಾವು ದಯಮಾಡಿ ಕೇಳಿ. ನೀವು ದಯಮಾಡಿ ಆ ರೀತಿಯಲ್ಲಿ ಕೇಳಬೇಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸಿವಿಲ್ ಎನಫೋರ್ಸ್‌ಮೆಂಟಿನವರಿಗೆ ಈಗ್ಗೆ ಒಂದು ತಿಂಗಳ ಹಿಂದೆ ನಾನೇ ಲೆಟರ್ ಹೆಡ್‌ನಲ್ಲಿ ಬರೆದು ಕೊಟ್ಟಿದ್ದರೂ ಕೂಡ ಇದುವರೆಗೂ ಏನೂ ಆಗಿಲ್ಲ. ಇನ್ನು ಎಂದು ಇವರು ಕ್ರಮ ತೆಗೆದುಕೊಳ್ಳುವುದು? ನಾನೇ ಸ್ವತಃ ಹೋಗಿ ಸಿವಿಲ್ ಎನ್‌ಫೋರ್ಸ್‌ಮೆಂಟ್‌ನವರಿಗೆ ಪತ್ರ ಕೊಟ್ಟಿದ್ದೇನೆ. ಇದುವರೆಗೆ ಕ್ರಮ ತೆಗೆದುಕೊಂಡಿಲ್ಲ. ಈಗ ಮತ್ತೆ ಇವರು ''ಸೂಕ್ತ ಕ್ರಮ'' ಎಂದು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು: ಶೂನ್ಯವೇಳೆಯಲ್ಲಿ ಎಷ್ಟು ಹೊತ್ತು ಚರ್ಚೆ ಮಾಡುವುದು? ನೀವೇ ಹೇಳಿದಿರಿ, ಶೂನ್ಯವೇಳೆಯಲ್ಲಿ ಎಷ್ಟು ಟೈಮ್ ಚರ್ಚೆ ಮಾಡುವುದು?

ಶ್ರೀ ವಾಟಾಳ್ ನಾಗರಾಜ್: ಶೂನ್ಯವೇಳೆ ಎಂದರೆ, ಇದೇನು ರಾಹುಕಾಲವೇ ಅಥವಾ ಯಮಗಂಡಕಾಲವೇ?

ಉಪಾಧ್ಯಕ್ಷರು: ಈಗ ಸಭೆಯನ್ನು ಮುಂದೂಡಲಾಗಿದೆ. ಊಟದ ನಂತರ 3 ಗಂಟೆಗೆ ಪುನಃ ಸಭೆ ಸೇರಲಾಗುವುದು.

(ಸದನವು ಮತ್ತೆ ಮಧ್ಯಾಹ್ನ 3.20 ಗಂಟೆಗೆ ಸಮಾವೇಶಗೊಂಡಿತು)

(ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ.ಮಾಮನಿಯವರು) ಪೀಠವನ್ನಲಂಕರಿಸಿದರು)

ಉಪಾಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆ; ತೆಗೆದುಕೊಳ್ಳೋಣ. ಶೂನ್ಯ ವೇಳೆ ಮುಕ್ತಾಯವಾಯಿತು. ಗಮನ ಸೆಳೆಯುವ ಸೂಚನೆಗಳು ಎರಡಿವೆ.

ಅಧ್ಯಕ್ಷರ ಅಪ್ಪಣೆ ಮೇಲೆಗೆ ಪ್ರಸ್ತಾಪಿಲ್ಪಟ್ಟ ವಿಷಯ

(ಋ) ಕಾವೇರಿ ಪ್ರಾಧಿಕಾರ ರಚನೆ ಕುರಿತು.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಇದು ಗಮನ ಸೆಳೆಯುವ